# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/131/14-15 ದಿನಾಂಕ : 05-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಜಿ ಅಬ್ಬಾಸ್ ಉರ್ಫ್ ಅಬ್ಬಾಸ್ ವಲಿ ತಂದೆ ಜಿ ಮೊಹಮ್ಮದ್, ಉದ್ಯೋಗ\|\|ಒಕ್ಕಲುತನ, ಸಾ\|\|ಯಾಳ್ಪಿ ಗ್ರಾಮ, ತಾ\|\|ಬಳ್ಳಾರಿ<br><br>**(1) ಟಿ ಪ್ರಕಾಶ್ (2) ಟಿ ನೂರ್ ಬಾಷಾ (3) ಬಿ ರಮೇಶ್ (4) ಅನ್ವರ್ ಬಾಷಾ ವಕೀಲರು ಬಳ್ಳಾರಿ** | (1) ತಹಶೀಲ್ದಾರರು, ಬಳ್ಳಾರಿ,<br>(2) ಕಂದಾಯ ನಿರೀಕ್ಷಕರು, ರೂಪನಗುಡಿ ಮತ್ತು<br>(3) ಗ್ರಾಮ ಲೆಕ್ಕಾಧಿಕಾರಿಗಳು, ಯಾಳ್ಪಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಯಾಳ್ಪಿ | 151/B, 152/B, 153/A | 01.14, 0.86, 01.09 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ರೂಪನಗುಡಿ ಇವರ ಎಂ.ಆರ್. ನಂ ಹೆಚ್ 15/2012-13 ದಿನಾಂಕ: 08-12-2012 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 09-10-2015, ಮತ್ತು 05-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ದಿನಾಂಕ: 05-08-2016 ರಂದು ವಿಚಾರಣೆಗೆ ಈ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ, ಬಳ್ಳಾರಿ ತಾಲ್ಲೂಕಿನ ಯಾಳ್ಪಿ ಗ್ರಾಮದ ಸ.ನಂ 151/B, 152/B, 153/A ವಿಸ್ತೀರ್ಣ: 01.14, 0.86, 01.09 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ರೂಪನಗುಡಿ ಇವರ ಎಂ.ಆರ್. ನಂ ಹೆಚ್ 15/2012-13 ನ್ನು ಮತ್ತು ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಗಿ ಮಾಡಲಾಗಿ ಕಂದಾಯ ನಿರೀಕ್ಷಕರ ಆದೇಶ ಹೆಚ್ 15/12-13 ರಲ್ಲಿ ಕಂದಾಯ ನಿರೀಕ್ಷಕರು ರೂಪನಗುಡಿ ಇವರು ಮುದ್ರಾಂಕ ಶುಲ್ಕ ಪಾವತಿಸಿಲ್ಲವೆಮದು ಹಕ್ಕು ಬದಲಾವಣೆಯನ್ನು ಗೈರು ಮಂಜೂರು ಮಾಡಿರುವುದು ಕಂಡು ಬಂದಿರುತ್ತದೆ. ಮುಂದುವರೆದು Registration Act ಕಲಂ 17 ನ್ನು ಉಲ್ಲಂಘಿಸಿ **ನೋಂದಾವಣೆಯಲ್ಲದ ಪಾಲು ವಿಭಾಗ ಪತ್ರ ಆಧರಿಸಿ** ಹಕ್ಕು ಬದಲಾವಣೆಯನ್ನು ಮಾಡಿಕೊಡುವಂತೆ ಅಪೀಲು ದಾರರು ಕೋರಿರುತ್ತಾರೆ. ಕಾರಣ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಮುಂದಿನ ಪುಟಕ್ಕೆ